**ವ್ಯಾಖ್ಯಾನ:**

# ಗಂಡ ಮಾಡಿದ ಪಾಪ ಹೆಂಡತಿಗಿಲ್ಲ

**ಉಗಾಭೋಗ:**

**ಗಂಡ ಮಾಡಿದ ಪಾಪ ಹೆಂಡತಿಗಿಲ್ಲ**
**ಹೆಂಡತಿ ಮಾಡಿದ ಪಾಪ ಗಂಡಗುಂಟು**
**ಹೆಂಡತಿ ಮಾಡಿದ ಪುಣ್ಯ ಗಂಡಗಿಲ್ಲ**
**ಗಂಡ ಮಾಡಿದ ಪುಣ್ಯ ಹೆಂಡತಿಗುಂಟು**
**ಜೀವ-ಜೀವರ ಭೇದ ನೀನೆ ಉದ್ಧರಿಸಯ್ಯ**
**ಪುರಂದರ ವಿಠ್ಠಲ**

**ಉಗಾಭೋಗದ ಚಿಂತನೆ:**

ಇದರ ಒಳ ಅರ್ಥ ತಿಳಿಯಬೇಕಾದರೆ ಈ ಉಗಾಭೋಗದ ಭಾಷೆ ಮೊದಲು ತಿಳಿಯಬೇಕು. ಇದೊಂದು ಅರ್ಥವಾದ. ಅಂದರೆ, ಭಾರತೀಯ ತತ್ವಶಾಸ್ತ್ರ (ಮುಖ್ಯವಾಗಿ ಮೀಮಾಂಸಾ ದರ್ಶನ) ಮತ್ತು ಕಾವ್ಯಮೀಮಾಂಸೆಯ ಹಿನ್ನೆಲೆಯಲ್ಲಿ 'ಅರ್ಥವಾದ' ಎಂಬ ಪದಕ್ಕೆ ಇನ್ನೊಂದು ವಿಶಿಷ್ಟ ಅರ್ಥವಿದೆ. ಅಲ್ಲಿ ಯಾವುದಾದರೂ ಒಂದು ನಿಯಮ ಅಥವಾ ಕಾರ್ಯವನ್ನು (ವಿಧಿ) ಮಾಡಲು ಪ್ರೋತ್ಸಾಹಿಸುವ ಸಲುವಾಗಿ ಬಳಸುವ ಹೊಗಳಿಕೆಯ (ಸ್ತುತಿ) ಅಥವಾ ವಿವರಣಾತ್ಮಕ ವಾಕ್ಯಗಳನ್ನು 'ಅರ್ಥವಾದ' ಎಂದು ಕರೆಯಲಾಗುತ್ತದೆ.

ಕೆಲವಡೆ ಆಯಾ ವಾಕ್ಯಗಳ ಅಥವಾ ಪದಗಳ Spirit ಮಾತ್ರ ತೆಗೆದೂಕೊಳ್ಳಬೇಕು..
ಇದೂ ಅಂಥದ್ದೇ.. ಇಲ್ಲಿಯ ಉಗಾಭೋಗದಲ್ಲಿಯೂ ಹಾಗೆಯೇ ತೆಗೆದುಕೊಳ್ಳಬೇಕು.

ಇಲ್ಲಿ ಮೊದಲು ತಿಳಿದುಕೊಳ್ಳುವ ವಿಷಯವೇನೆಂದರೆ, ಧರ್ಮದ ಕಾರ್ಯಗಳಲ್ಲಿ ಗಂಡ ಹೆಂಡತಿಯರ ಸಹಕಾರ ಮುಖ್ಯ. ಹೆಂಡತಿಯು ಗಂಡನ ಯಾವುದೇ ಧರ್ಮ ಕಾರ್ಯಗಳಲ್ಲಿ ಆಸಕ್ತಳಾಗಿ ಮನಸ್ಸಿನಿಂದ ಇದು ದೇವರ ಇಚ್ಛೆಯಂತೆ ಗಂಡನಿಂದ ಮಾಡಲ್ಪಡುತ್ತಿದೆ ಅಂತ ತಿಳಿದು ಗಂಡನಿಗೆ ಸಹಕಾರ ನೀಡಿದರೆ ಮಾತ್ರ ಅವಳಿಗೂ ಪುಣ್ಯದ ಪಾಲು ದೊರೆತೀತು. ಹಾಗಾಗದೆ ಅದಕ್ಕೆ ವಿರುದ್ಧವಾಗಿ ನಡೆದರೆ ಖಂಡಿತವಾಗಿಯೂ ಗಂಡನ ಪುಣ್ಯದಲ್ಲಿ ಪಾಲಿರುವುದಿಲ್ಲ. ಗಂಡ ಹೆಂಡತಿಯರು ಧರ್ಮಕ್ಕೆ ಪೂರಕವಾಗಿ ಸಹಕಾರದಿಂದಿರಲಿ ಅಂತ ಮಾತ್ರ ಇದರ ಅರ್ಥ.

ಹಾಗೆಯೇ ಹೆಂಡತಿಯು ಗಂಡನ ಎಲ್ಲ ದುಷ್ಕೃತ್ಯಗಳಿಗೆ ಏಕೆ ಹೊಣೆಯಾಗಲಾರಳೆಂದರೆ, ಹೆಂಡತಿಯು ಗಂಡನ ಜವಾಬ್ದಾರಿಯಾದ್ದರಿಂದ ಮತ್ತು ಗಂಡನ ನಿಯಂತ್ರಣಕ್ಕೆ ಒಳಪಟ್ಟವಳು (ಇದು ಆ ಕಾಲಮಾನದಲಿದ್ದ ಪರಿಸ್ಥಿತಿ). ಗಂಡನ ಮೇಲೆ ಅಧಿಕಾರ ಅಥವಾ ಗಂಡನನ್ನು ಸರಿಪಡಿಸಿ ಒಳ್ಳೆಯ ದಾರಿಗೆ ತರಲು ಆ ಕಾಲದಲ್ಲಿ ಅಸಮರ್ಥಳಾಗಿದ್ದರಿಂದ ಅವನ ಪಾಪಕ್ಕೆ ಭಾಗಿಯಾಗಲಾರಳು.

ಅದೇ ರೀತಿ ಹೆಂಡತಿಯ ಪಾಪದಲ್ಲಿ ಗಂಡನಿಗೆ ಭಾಗ ಇದೆ, ಏಕೆಂದರೆ ಹೆಂಡತಿಯನ್ನು ಸರಿಪಡಿಸುವ ಅವಕಾಶ ಮತ್ತು ನೈತಿಕ ಹಕ್ಕು ಇರೋಣದರಿಂದ. ಒಟ್ಟಾರೆ ಹೇಳಬೇಕೆಂದರೆ, ಗಂಡ ಹೆಂಡತಿ ಒಟ್ಟಿಗೆ ಧರ್ಮಕಾರ್ಯಗಳಲ್ಲಿ ತೊಡಗಿ ಸಮಾಜದಲ್ಲಿರಲಿ ಅಂತ ಅಭಿಪ್ರಾಯ.

ಗಂಡ ಮತ್ತು ಹೆಂಡತಿ ಒಂದೇ ಮನೆಯಲ್ಲಿದ್ದರೂ, ಒಟ್ಟಿಗೆ ಪೂಜೆ ಮಾಡಿದರೂ, ಅವರ ಜೀವಾತ್ಮಗಳ ಯೋಗ್ಯತೆ ಮತ್ತು ಸ್ವರೂಪ ಸಂಪೂರ್ಣ ಭಿನ್ನವಾಗಿರಬಹುದು. ಮೋಕ್ಷವೆಂದರೆ ಈ ಭೌತಿಕ ದೇಹ ಮತ್ತು ಸಂಬಂಧಗಳ ಹಂಗನ್ನು ತೊರೆದು, ಭಗವಂತನ ಸಾಕ್ಷಾತ್ಕಾರ ಪಡೆಯುವುದು. ಜೀವಾತ್ಮವು ತನ್ನ ಸ್ವರೂಪಕ್ಕೆ ತಕ್ಕಂತೆ ಭಕ್ತಿ ಮತ್ತು ಜ್ಞಾನವನ್ನು ಸಂಪಾದಿಸಿದಾಗ ಮಾತ್ರ ಅದಕ್ಕೆ ಮುಕ್ತಿ ದೊರೆಯುತ್ತದೆ.

ಮನುಷ್ಯರ ದಾಂಪತ್ಯವು 'ಅನಿಯತ' (ಶಾಶ್ವತವಲ್ಲದ್ದು) ಆಗಿರುವುದೇ ಮೋಕ್ಷದ ಪಯಣದಲ್ಲಿ ಜೀವಾತ್ಮವು ಏಕಾಂಗಿಯಾಗಿರಲು ಮುಖ್ಯ ಕಾರಣ. ಭೌತಿಕ ಜಗತ್ತಿನಲ್ಲಿ ಮನುಷ್ಯರ ಸಂಬಂಧಗಳು ಸಂಪೂರ್ಣವಾಗಿ ಕರ್ಮವನ್ನು ಆಧರಿಸಿವೆ. "ಋಣಾನುಬಂಧ ರೂಪೇಣ ಪಶು ಪತ್ನೀ ಸುತಾಲಯಃ" ಎಂಬ ಮಾತಿದೆ. ಅಂದರೆ ಹಿಂದಿನ ಜನ್ಮಗಳ ಕರ್ಮದ ಲೆಕ್ಕಾಚಾರವನ್ನು (ಋಣವನ್ನು) ತೀರಿಸಿಕೊಳ್ಳಲು ಎರಡು ಜೀವಾತ್ಮಗಳು ಗಂಡ-ಹೆಂಡತಿಯರಾಗಿ ಜನಿಸುತ್ತವೆ.

ಆ ಋಣದ ಲೆಕ್ಕಾಚಾರ ಮುಗಿದ ತಕ್ಷಣ, ಅಥವಾ ದೇಹಾಂತ್ಯದ ನಂತರ ಆ ಭೌತಿಕ ಸಂಬಂಧ ಅಲ್ಲಿಗೇ ಕೊನೆಗೊಳ್ಳುತ್ತದೆ. ಅದು ಶಾಶ್ವತವಲ್ಲ. ಗೃಹಸ್ಥರಾಗಿರುವಷ್ಟು ದಿನ ಅವರಿಬ್ಬರೂ ಮಾಡುವ ಕರ್ಮಗಳ (ದಾನ, ಯಜ್ಞ) ಫಲವಾದ 'ಪುಣ್ಯ' ಇಬ್ಬರಿಗೂ ಹಂಚಿಕೆಯಾಗುತ್ತದೆ, ಏಕೆಂದರೆ ಆ ಋಣಾನುಬಂಧದ ಚೌಕಟ್ಟಿನಲ್ಲಿ ಅವರಿಬ್ಬರೂ ಪಾಲುದಾರರು.

ನಿಯತ ದಾಂಪತ್ಯ' ಅಥವಾ 'ಸ್ವರೂಪ ದಾಂಪತ್ಯ' (ಆತ್ಮಗಳ ಮಟ್ಟದ ಶಾಶ್ವತ ವಿವಾಹ) ಕೇವಲ ದೇವತೆಗಳಿಗೆ ಮಾತ್ರ ಸೀಮಿತ (ಉದಾಹರಣೆಗೆ: ಲಕ್ಷ್ಮೀ-ನಾರಾಯಣ). ಅವರ ಸ್ವರೂಪವೇ ಅಂತಹುದು.

ಆದರೆ ಮನುಷ್ಯ ಜೀವಾತ್ಮಗಳಿಗೆ ಅಂತಹ ನಿಯತ ದಾಂಪತ್ಯವಿಲ್ಲ. ಹುಟ್ಟು-ಸಾವುಗಳ ಚಕ್ರದಲ್ಲಿ ಒಂದು ಜೀವಾತ್ಮವು ಎಷ್ಟೋ ಜನ್ಮಗಳನ್ನು ಎತ್ತುತ್ತದೆ, ಪ್ರತಿ ಜನ್ಮದಲ್ಲೂ ಬೇರೆ ಬೇರೆ ಸಂಬಂಧಗಳನ್ನು (ಪತಿ, ಪತ್ನಿ, ಮಕ್ಕಳು) ಹೊಂದುತ್ತದೆ. ಹೀಗಿರುವಾಗ ಯಾವುದೋ ಒಂದು ಜನ್ಮದ ಸಂಗಾತಿಯ ಜ್ಞಾನದಿಂದ ಇನ್ನೊಂದು ಜೀವಾತ್ಮಕ್ಕೆ ಮೋಕ್ಷ ಪ್ರಾಪ್ತಿಯಾಗಲು ಸಾಧ್ಯವಿಲ್ಲ.

ಗಂಡ ಮತ್ತು ಹೆಂಡತಿ ಒಂದೇ ಮನೆಯಲ್ಲಿದ್ದರೂ, ಒಟ್ಟಿಗೆ ಪೂಜೆ ಮಾಡಿದರೂ, ಅವರ ಜೀವಾತ್ಮಗಳ ಯೋಗ್ಯತೆ ಮತ್ತು ಸ್ವರೂಪ ಸಂಪೂರ್ಣ ಭಿನ್ನವಾಗಿರಬಹುದು. ಮೋಕ್ಷವೆಂದರೆ ಈ ಭೌತಿಕ ದೇಹ ಮತ್ತು ಸಂಬಂಧಗಳ ಹಂಗನ್ನು ತೊರೆದು, ಭಗವಂತನ ಸಾಕ್ಷಾತ್ಕಾರ ಪಡೆಯುವುದು. ಜೀವಾತ್ಮವು ತನ್ನ ಸ್ವರೂಪಕ್ಕೆ ತಕ್ಕಂತೆ ಭಕ್ತಿ ಮತ್ತು ಜ್ಞಾನವನ್ನು ಸಂಪಾದಿಸಿದಾಗ ಮಾತ್ರ ಅದಕ್ಕೆ ಮುಕ್ತಿ ದೊರೆಯುತ್ತದೆ.

ಗೃಹಸ್ಥಾಶ್ರಮ ಎಂಬುದು ಸಂಸಾರದ ರಥವನ್ನು ಎಳೆಯಲು, ಸಮಾಜವನ್ನು ಮುನ್ನಡೆಸಲು ಮತ್ತು ಕರ್ಮಗಳನ್ನು ಸವೆಯಲು ಇರುವ ಒಂದು ತಾತ್ಕಾಲಿಕ ವ್ಯವಸ್ಥೆ (ವ್ಯಾವಹಾರಿಕ ಸತ್ಯ). ಆದ್ದರಿಂದ ಅಲ್ಲಿ ಕರ್ಮಫಲದ ಹಂಚಿಕೆಯಿದೆ. ಆದರೆ ಜೀವಾತ್ಮವು ಅನಾದಿ ಮತ್ತು ಅದರ ಅಂತಿಮ ಗುರಿಯಾದ 'ಮೋಕ್ಷ'ವು ಸಂಪೂರ್ಣವಾಗಿ ಪಾರಮಾರ್ಥಿಕ ಸತ್ಯ. ಮನುಷ್ಯ ದಾಂಪತ್ಯವು ನಿಯತವಾಗಿಲ್ಲದಿರುವುದರಿಂದಲೇ, ಮೋಕ್ಷದ ಬಾಗಿಲಲ್ಲಿ ಪ್ರತಿಯೊಂದು ಜೀವವೂ ತನ್ನದೇ ಸ್ವ-ಕರ್ಮ ಮತ್ತು ಜ್ಞಾನದ ಮೂಟೆಯನ್ನು ಮಾತ್ರ ಹೊತ್ತು ಏಕಾಂಗಿಯಾಗಿ ನಿಲ್ಲಬೇಕಾಗುತ್ತದೆ.

**ಏಕೋ ಪ್ರಸೂಯತೇ ಜಂತುರೇಕ ಏವ ಪ್ರಲೀಯತೇ ।**
**ಏಕೋऽನುಭುಂಕ್ತೇ ಸುಕೃತಮೇಕ ಏವ ಚ ದುಷ್ಕೃತಮ್ ॥**

(ಶ್ರೀಮದ್ಭಾಗವತ: ೧೦.೪೯.೨೧)

"ಪ್ರತಿಯೊಬ್ಬ ಜೀವಿಯೂ ಈ ಜಗತ್ತಿನಲ್ಲಿ ಒಂಟಿಯಾಗಿಯೇ ಹುಟ್ಟುತ್ತಾನೆ ಮತ್ತು ಒಂಟಿಯಾಗಿಯೇ ಸಾಯುತ್ತಾನೆ. ಹಾಗೆಯೇ, ತಾನು ಮಾಡಿದ ಒಳಿತು-ಕೆಡುಕುಗಳ (ಪುಣ್ಯ-ಪಾಪಗಳ) ಫಲವನ್ನು ಆಯಾ ಜೀವಿಯು ತಾನೊಬ್ಬನೇ ಅನುಭವಿಸಬೇಕಾಗುತ್ತದೆ."

***"ಯಾದೃಶಂ ವಪತೇ ಬೀಜಂ ಕ್ಷೇತ್ರಮಾಸಾದ್ಯ ಕರ್ಷಕಃ |***
***ಸುಕೃತೇ ದುಷ್ಕೃತೇ ವಾಪಿ ತಾದೃಶಂ ಲಭತೇ ಫಲಮ್ ||"***

*** *ಅರ್ಥ:* *** ರೈತನು ತನ್ನ ಹೊಲದಲ್ಲಿ ಯಾವ ರೀತಿಯ ಬೀಜವನ್ನು ಬಿತ್ತುತ್ತಾನೋ, ಅದೇ ರೀತಿಯ ಬೆಳೆಯನ್ನು ಪಡೆಯುತ್ತಾನೆ. ಅಂತೆಯೇ, ಜೀವನು ತಾನು ಮಾಡುವ ಪುಣ್ಯ (ಸುಕೃತ) ಮತ್ತು ಪಾಪ (ದುಷ್ಕೃತ) ಕರ್ಮಗಳಿಗೆ ತಕ್ಕಂತೆಯೇ ಮುಂದಿನ ಜನ್ಮಗಳಲ್ಲಿ ಫಲವನ್ನು ಪಡೆಯುತ್ತಾನೆ.

ಆದ್ದರಿಂದ ಅವರವರ ಕರ್ಮಾನುಸಾರಿಯಾಗಿಯೇ ಅವರವರ ಪುಣ್ಯ ಪಾಪಗಳ ಲೆಕ್ಕಾಚಾರ..

ಶಾಂತಿ ಪರ್ವದ ಅತ್ಯಂತ ಮಹತ್ವದ ಭಾಗವಾದ *ಮೋಕ್ಷಧರ್ಮ ಪರ್ವ*ದಲ್ಲಿ ಜೀವಾತ್ಮದ ಅಂತಿಮ ಗುರಿಯಾದ ಮೋಕ್ಷದ ಬಗ್ಗೆ ಚರ್ಚೆ ಬರುತ್ತದೆ. ಇಲ್ಲಿ ಕರ್ಮಕಾಂಡ (ಪುಣ್ಯ ಸಂಪಾದನೆ) ಮತ್ತು ಜ್ಞಾನಕಾಂಡದ (ಮೋಕ್ಷ ಸಾಧನೆ) ನಡುವಿನ ಗೆರೆಯನ್ನು ಬಹಳ ಸ್ಪಷ್ಟವಾಗಿ ಎಳೆಯಲಾಗಿದೆ.

*** *ಸ್ವರ್ಗ ಸುಖಕ್ಕೆ ಜೊತೆಯಾಗುವ ಪುಣ್ಯ:* *** ಗೃಹಸ್ಥರಾಗಿ ಪತಿ-ಪತ್ನಿಯರು ಒಟ್ಟಾಗಿ ಮಾಡುವ ದಾನ, ಧರ್ಮ ಮತ್ತು ಯಜ್ಞಗಳಿಂದ ಬರುವ ಪುಣ್ಯವು ಅವರನ್ನು ಸ್ವರ್ಗಾದಿ ಉನ್ನತ ಲೋಕಗಳಿಗೆ ಜೊತೆಯಾಗಿ ಕೊಂಡೊಯ್ಯುತ್ತದೆ.

*** *ಆದರೆ ಮೋಕ್ಷವು ವೈಯಕ್ತಿಕ ಸಾಧನೆ:* *** ಜನಕ ಮಹಾರಾಜ, ಶುಕಮುನಿ ಮುಂತಾದವರ ಸಂವಾದಗಳಲ್ಲಿ ಸ್ಪಷ್ಟವಾಗುವಂತೆ, ಅಪರೋಕ್ಷ ಜ್ಞಾನ (ಭಗವಂತನ ಸಾಕ್ಷಾತ್ಕಾರ) ಮತ್ತು ಮೋಕ್ಷದ ವಿಷಯಕ್ಕೆ ಬಂದಾಗ ಪ್ರತಿಯೊಂದು ಜೀವಾತ್ಮದ ಸಾಧನೆಯೂ ಸಂಪೂರ್ಣವಾಗಿ ಸ್ವತಂತ್ರ. ಗಂಡನು ಮಹಾಜ್ಞಾನಿಯಾದ ಮಾತ್ರಕ್ಕೆ ಹೆಂಡತಿಗೆ ಮುಕ್ತಿ ಸಿಗುವುದಿಲ್ಲ, ಅಥವಾ ಹೆಂಡತಿ ಜ್ಞಾನಿಯಾದ ಮಾತ್ರಕ್ಕೆ ಗಂಡನಿಗೆ ಮುಕ್ತಿ ಸಿಗುವುದಿಲ್ಲ. ಮೋಕ್ಷಕ್ಕಾಗಿ ಅವರವರೇ ಭಕ್ತಿ, ವೈರಾಗ್ಯ ಮತ್ತು ಧ್ಯಾನದ ಮೂಲಕ ಭಗವಂತನ ಅನುಗ್ರಹವನ್ನು ಪಡೆಯಬೇಕು.

***ಸಾರಾಂಶ:***

ಸಂಸಾರ ಎಂಬ ರಥಕ್ಕೆ ಪತಿ-ಪತ್ನಿಯರು ಎರಡು ಗಾಲಿಗಳಿದ್ದಂತೆ. ಈ ಭೌತಿಕ ಜಗತ್ತಿನಲ್ಲಿ (ವ್ಯಾವಹಾರಿಕವಾಗಿ) ಗಂಡನು ಗಳಿಸುವ ಪುಣ್ಯದಲ್ಲಿ ಹೆಂಡತಿಯ ಪಾಲು ನಿಶ್ಚಿತವಾಗಿರುತ್ತದೆ. ಅದು ಆಕೆಯ ಶ್ರದ್ಧೆ ಮತ್ತು ಪಾತಿವ್ರತ್ಯದ ಫಲವೇ ಹೊರತು ಉಚಿತವಾಗಿ ಸಿಗುವಂತಹದ್ದಲ್ಲ.

**<u>ಶ್ರೀ ಕೃಷ್ಣಾರ್ಪಣಮಸ್ತು</u>**

**ಲೇಖಕರು:** Dr. ಶ್ರೀನಿಧಿ ತಟ್ಟಿ, ಬೆಂಗಳೂರು